ಸಮುದಾಯಗಳನ್ನು ಒಟ್ಟಿಗೆ ಹೇಗೆ ಚಿತ್ರಿಸುತ್ತೀರಿ. ಈ ಎರಡು ಪ್ರಕ್ರಿಯೆಗಳ ನಡುವೆ ಒಳ್ಳೆಯ ಸಮತೋಲನವನ್ನು ತರುವ ಬಗೆಯನ್ನು ಹೇಗೆ ಗಳಿಸಿದ್ದೀರಿ?

ಇವೆರಡೂ ನನ್ನ ಒಳಗೇ ಇವೆ... ಹಾಗಾಗಿ... 'ಮನುಷ್ಯ'ನನ್ನು ನಾನು ಹಲವಾರು ಕೋನಗಳಿಂದ ನೋಡಲು ಪ್ರಯತ್ನಿಸುತ್ತೇನೆ. ನಾನು ಹಾಗೆ ನೋಡುತ್ತಿರುವಂತಹ ಎಲ್ಲದರಲ್ಲಿಯೂ ಸ್ವತಃ ನನ್ನಲ್ಲಿರುವ ಮಿತಿಗಳೂ ಇವೆ/ಇರಬಹುದು ಎನ್ನುವ ಪ್ರಜ್ಞೆಯು ನನ್ನೊಳಗೆ ಸದಾ ಇರುತ್ತದೆ.

◆ ಕಾವ್ಯಕ್ಕಿಂತ ಗದ್ಯದಲ್ಲಿ ನಿಮಗೆ ಹೆಚ್ಚು ಆಸಕ್ತಿಯೇ?

ನನಗೆ ಇವೆರಡೂ ಬೇರೆಬೇರೆ ಅಂತ ಅನ್ನಿಸಿಯೇ ಇಲ್ಲ. ಕಥೆಯೊಳಗೆ ಕವಿತೆಯೊಂದು 'ಅಮೂರ್ತವಾಗಿ' ಹರಿದಾಡಿದಾಗ ಕಥೆಯು ಕವಿತೆಯಾಗುತ್ತದೆ. ಹಾಗೇನೆ, ಒಂದು ಕವಿತೆ, ಕಥೆ ಯಾವಾಗ ಆಗುತ್ತಪ್ಪ ಅಂದ್ರೆ ಅದು ಮೂರ್ತತೆಗೆ ಹೆಚ್ಚು ಹೆಚ್ಚು ಹತ್ತಿರವಾದಾಗ. ಖಲೀಲ್ ಗಿಬ್ರಾನ್‌ನನ್ನು ಓದುವಾಗ ನಮಗೆ ಇದರ ಅನುಭವ ತಕ್ಷಣ ಆಗುತ್ತೆ.

◆ ನೀವು ಹಲವಾರು ಕ್ಷೇತ್ರಗಳಲ್ಲಿ ಕೆಲಸ ಮಾಡಿದ್ದೀರಿ. ಅವುಗಳಲ್ಲಿ ನಿಮಗೆ ಖುಷಿ ನೀಡುವ ಮಾಧ್ಯಮ ಯಾವುದು?

ನನ್ನ ಅಭಿವ್ಯಕ್ತಿ ಮಾಧ್ಯಮ ಸಾಹಿತ್ಯ ಮಾತ್ರ ಅಲ್ಲ. ಧಾರಾವಾಹಿಗಳಿಗೆ ಮತ್ತು ಎರಡು ಸಿನಿಮಾಗಳಿಗೆ ಸ್ಕ್ರಿಪ್ಟ್ ಬರಹಗಾರನಾಗಿ ಕೆಲಸ ಮಾಡಿದ್ದೇನೆ. ಇತ್ತೀಚೆಗೆ ಒಂದು ಮಲಯಾಳಂ ಸಿನಿಮಾದ ಮುಖ್ಯಪಾತ್ರದಲ್ಲಿ ನಟಿಸಿದ್ದೇನೆ. ಸಿನಿಮಾ ಗೀತೆಗಳನ್ನು ಬರೆದಿದ್ದೇನೆ. ಇವೆಲ್ಲ ಅನುಭವಗಳೂ ನನಗೆ ಕಲಿಸಿದ್ದು ಏನೆಂದರೆ, ಎಲ್ಲ ಕಲಾಮಾಧ್ಯಮಗಳ ಹೃದಯವೂ ಒಂದೇ ಎಂದು.

◆ ನೀವೊಬ್ಬ ಸೃಜನಶೀಲ ಬರಹಗಾರ. ಪತ್ರಿಕಾರಂಗದಲ್ಲಿಯೂ ಹಲವು ವರ್ಷಗಳು ಕೆಲಸ ಮಾಡಿರುವಿರಿ. ಕುತೂಹಲಕ್ಕೆ ಕೇಳುತ್ತಿದ್ದೇನೆ, ಸತ್ಯ ಮತ್ತು ಕಲ್ಪನೆಯ ಸಮತೋಲನವನ್ನು ಹೇಗೆ ನಿಭಾಯಿಸುತ್ತೀರಿ?

ಈ ಪ್ರಪಂಚದಲ್ಲಿ ನೂರಕ್ಕೆ ನೂರು ವಾಸ್ತವ ಅನ್ನುವಂತದ್ದಿಲ್ಲ. ಹಾಗೆಯೇ, ನೂರಕ್ಕೆ ನೂರು ಕಲ್ಪನೆಯೂ ಇರಲು ಸಾಧ್ಯವಿಲ್ಲ. ಈಗ ಈ ಕಾಲದಲ್ಲಿ ಬದುಕುವ ಹೊತ್ತಿನಲ್ಲಿಯೇ ನಾವು ಎಷ್ಟೋ ಭೂತಕಾಲವೂ ಆಗಿರುತ್ತೇವೆ. ಈ ಕೂಡುಬಿಂದುವಿನಲ್ಲಿಯೇ ನಮಗೆ ಸಹಾನುಭೂತಿ ಮತ್ತು ಅನುಕಂಪವನ್ನು ಒಪ್ಪಲು ಸಾಧ್ಯವಾಗುವಂತದ್ದು, ನೀನು ಬೀದಿಯಲ್ಲಾದರೂ ಇರು ಅಥವಾ ಸಂಪಾದಕನ ಕುರ್ಚಿಯಲ್ಲಾದರೂ ಕುಳಿತಿರು, ಅದರಿಂದ ಏನೂ ವ್ಯತ್ಯಾಸವಾಗುವುದಿಲ್ಲ.

◆ ನಿಮ್ಮ 'ಬೋಧೇಶ್ವರ', 'ಜವಾನ್ ರೋಡ್', 'ಕೆ.ಪಿ. ಉಮ್ಮರ್', 'ಮಮ್ಮುಮುಕ್ರಿ' ಕಥೆಯ ಪಾತ್ರಗಳಲ್ಲಿ ಕಾಣುವ ಭೀತಿಯ ಹಿಂದೆ 'ವ್ಯವಸ್ಥೆ'ಯ ಭಯವಿದೆ. ಇದರ ಬಗ್ಗೆ ಹೇಳಿ. ಯಾಕಂದ್ರೆ, ಈ ಭೀತಿಯ ಚಿತ್ರಣವು ಕೇವಲ ಸೃಜನಶೀಲ ಅಭಿವ್ಯಕ್ತಿಯ ಪ್ರಶ್ನೆ ಮಾತ್ರವಲ್ಲ. ಇದು ಅಗತ್ಯವಾಗಿ ರಾಜಕೀಯ ಆಯಾಮಗಳನ್ನೂ ಒಳಗೊಳ್ಳುತ್ತದಲ್ಲವೆ?

ಎಲ್ಲ ಬಗೆಯ ಸೃಜನಶೀಲತೆಯೂ ಹಣ, ಭೌತಿಕತೆ, ಧರ್ಮ ಮತ್ತು ಅಧಿಕಾರದ ದಬ್ಬಾಳಿಕೆಯ ವಿರುದ್ಧವಾಗಿರುತ್ತದೆ. ನೀವು ಪ್ರಸ್ತಾಪಿಸಿದ ಕಥೆಗಳಲ್ಲಿ ಈ ಅಂಶವೇ ಕೇಂದ್ರವಾಗಿದೆ.

◆ ನಿತ್ಯ ಬದಲಾಗುತ್ತಲಿರುವ ಕೇರಳದ ರಾಜಕೀಯ ಸನ್ನಿವೇಶದ ಬಗ್ಗೆ ನಿಮ್ಮ ಅಭಿಪ್ರಾಯವೇನು? ಧರ್ಮಾಧಾರಿತ ರಾಜಕೀಯದ ಜೊತೆ ಇದರ

**ನನ್ನೂರು ಕಣ್ಣೂರು, ಇಲ್ಲಿಂದ ರೈಲಿನಲ್ಲಿ ಹೊರಟರೆ, ಕೆಲವೇ ಗಂಟೆಗಳಲ್ಲಿ ಮಂಗಳೂರನ್ನು ತಲುಪಬಹುದು. ಆದರೆ ಕನ್ನಡ ಭಾಷೆಯಲ್ಲಿ ಏನೆಲ್ಲ ಚಟುವಟಿಕೆಗಳು ನಡೆಯುತ್ತಿವೆ ಎಂಬುದು ನನಗೆ ತಿಳಿದಿಲ್ಲ. ಇದು ದುರದೃಷ್ಟಕರ. ಈ ಅಂತರಕ್ಕೆ ಸೇತುವೆ ಕಟ್ಟಲು ನಾವು ಮಾರ್ಗಗಳನ್ನು ಹುಡುಕಿಕೊಳ್ಳಬೇಕಾದ ತುರ್ತು ಇದೆ.**